# 4

# ವಾದ್ಯ ಸಂಗೀತ ಮತ್ತು ಸಭಾ ಪಿತೃಗಳು

ಎರಡನೆಯ ಶತಮಾನದ ಬರಹಗಾರರು ಪ್ರೇರಿತರಾಗಿರಲಿಲ್ಲ. ಅವರ ಅಧಿಕಾರಯುಕ್ತವಾದ ಹೇಳಿಕೆಗಳು ಇಪ್ಪತ್ತ-ಒಂದನೇ ಶತಮಾನದ ಸಭೆಗಳಿಗೆ ನಿಯಮಗಳಾಗಿರಲೂ ಸಾಧ್ಯವಿರಲಿಲ್ಲ. ಹೇಗೂ, ಅಪೊಸ್ತಲರ ನಂತರದ ವಿಚಾರಗಳನ್ನು ಅವರ ಬರವಣಿಗೆಗಳಿಂದ ಪರಿಗ್ರಹಿಸಬಹುದು. ಹೊಸ ಒಡಂಬಡಿಕೆಯ ಬರಹಗಾರರು ಪ್ರಯೋಗಿಸಿದ್ಧ ಗ್ರೀಕ್ ಭಾಷೆಯನ್ನು ಅವರು ಮಾತನಾಡುತ್ತಿದ್ದರು ಮತ್ತು ಬರೆಯುತ್ತಿದ್ದರು. ಆದುದರಿಂದ, ಗ್ರೀಕ್ ಭಾಷೆಯ ಬರಹಗಳನ್ನು ಅವರು ತಿಳಿದಿದ್ದ ಪರಿಯನ್ನು ನಾವು ಅರ್ಥಮಾಡಿಕೊಳ್ಳುವದಕ್ಕೆ ಸಾಧ್ಯವಿದೆ.

ಸುಮಾರು, ಕ್ರಿ.ಶ. 110ರಲ್ಲಿ, ಪ್ಲಿನಿ ಎಂಬುವವನು ಬಿತಾನ್ಯದ ಪರಮಾಧಿಕಾರಿಯಾಗಿದ್ದನು. ಅದು ಕಪ್ಪು ಸಮುದ್ರದ ದಕ್ಷಿಣ ಭಾಗದ ಸ್ಥಳವಾಗಿತ್ತು. ಕ್ರೈಸ್ತರ ವಿಷಯದಲ್ಲಿ ಯಾವ ರೀತಿಯಾಗಿ ವರ್ತಿಸಬೇಕೆಂದು ರೋಮಾಯದ ಚಕ್ರವರ್ತಿಗೆ ತಿಳುವಳಿಕೆಯನ್ನು ನೀಡಿದ್ದನು ಕ್ರೈಸ್ತರ ಕೂಟವನ್ನು ಎಂದಿಗೂ ಸಂದರ್ಶಿಸದ, ಒಬ್ಬ ಅನ್ಯ ಅಧಿಕಾರಿಯು, ಅವರ ಆರಾ ಧನೆಯ ವಿವರವನ್ನು ಅರಿಯಲು ಸಾಧ್ಯವಿರುವದಿಲ್ಲ. ಇತರರ ಬಾಯಿಂದ ಆರಾಧನೆಯ ಕುರಿತಾಗಿ ಕೇಳಲ್ಪಟ್ಟದ್ದನ್ನು ಮಾತ್ರ ಅವನು ತಿಳಿದಿದ್ದನು. ಅವನಿಗೆ ದೊರೆತ ಮಾಹಿತಿಯ ಪ್ರಕಾರ, ಕ್ರೈಸ್ತರು ಆರಾಧನೆಗೆ ವಾರದ ಒಂದು ನಿಗದಿತ ದಿವಸದಲ್ಲಿ ಸೇರಿ ಬಂದು "ಒಬ್ಬನೇ ... ದೇವರಿಗೆ ಕ್ರಿಸ್ತನ ಮೂಲಕ ಮುಂಜಾನೆಯಲ್ಲಿ ಹಾಡುತ್ತಿದ್ದರು" ಎಂದು ತಿಳಿದಿದ್ದನು.[1]

ಅಪೊಸ್ತಲ ಪಿತೃಗಳಲ್ಲಿ, *ಸಾಲೆ ಇನ್* ಎಂಬ ಕ್ರಿಯಾಪದವು ಒಂದೇ ಒಂದು ಸಾರಿ ದಾಖಲಾಗಿರುತ್ತದೆ. ಅದನ್ನು ಬಾರ್ನಬನು ಕೀರ್ತನೆ 22:22ರಿಂದ ಆರಿಸಿ ತಿಳಿಸಿರುವನು. ಅದರಲ್ಲಿ, "ನಿನ್ನ ನಾಮ ಮಹಿಮೆಯನ್ನು ನನ್ನ ಸಹೋದರರಿಗೆ ತಿಳಿಸುವೆನು. (ಅಥವಾ "ಸ್ತೋತ್ರ") ಸಭಾಮಧ್ಯದಲ್ಲಿ ನಿನ್ನನ್ನು ಸ್ತುತಿಸುವೆನು."[2] ಎಫೆಸ 5:19ರಲ್ಲಿ ಅಥವಾ ಕೊಲೊಸ್ಸೆ 3:16 ವಿಷಯಗಳನ್ನು ಅಪೊಸ್ತಲ ಪಿತೃಗಳಾಗಲಿ ಅಥವಾ ಆದಿ ಧರ್ಮ ಪ್ರತಿಪಾದಕರಾಗಲೀ ಸಮರ್ಥಿಸಲಿಲ್ಲ. ಹೃದಯದಿಂದ ಹಾಡಬೇಕು ಎಂಬುದು ಆದಿ ಮೂಲದ ಪ್ರತಿಪಾದನೆಯಾಗಿರುತ್ತದೆ. ಅಲೆಕ್ಸಾಂಡ್ರಿಯದ ಕ್ಲೆಮೆಂಟನು ಬರೆದು, "ಆತನಿಗೆ ನಿತ್ಯವಾದ ಸ್ತುತಿಯನ್ನು ಅರ್ಪಿಸೋಣ ಅದು ತುಟಿಗಳ ಸ್ತುತಿಯಾಗಿರದೆ, ಅದು ಹೃದಯದಿಂದಲೂ ಬರುವಂಥದ್ದಾಗಿರಲಿ, ಅದರ ಮೂಲಕ ಆತನು ನಮ್ಮನ್ನು ತನ್ನ ಪುತ್ರರನ್ನಾಗಿ ಸ್ವೀಕರಿಸಲಿ."[3] ರೋಮಾಯರಿಗೆ ಇಗ್ನೇಷಿಯಸನ್ನು ಪ್ರಬೋಧಿಸಿದಂತೆ: "ಪ್ರೀತಿಯಿಂದ ಒಟ್ಟಾಗಿ ಸೇರಿಕೊಂಡು ಯೇಸು ಕ್ರಿಸ್ತನ ಮೂಲಕ ತಂದೆಗೆ ಸ್ತುತಿಯನ್ನು ಸಲ್ಲಿಸಿರಿ"[4] (*ಎನ್ಟೈಟ್*) ಇಗ್ನೇಷಿಯಸನು ಇತರ ಸಂದರ್ಭದಲ್ಲಿ ಸಂಗೀತವಾದ್ಯದ ಕುರಿತು ಮಾತನಾಡಿದನೇ ವಿನಃ ಆರಾಧನೆಯಲ್ಲಿ ಅದರ ವಿಷಯವನ್ನು ಪ್ರಸ್ತಾಪಿಸಲಿಲ್ಲ. ಅವನು ಹಿರಿಯನಿಗೆ ಎಚ್ಚರಿಕೆಯ ಮಾತನ್ನು ನೀಡಿ,

> ಪರಿವರ್ತನೆಗೊಂಡ ನ್ಯಾಯವಾದ ಸಭಾಪಾಲಕನೇ, ದೇವರಿಗೆ ಯೋಗ್ಯವಾದವನೇ, ಸಭಾ ಹಿರಿಯನು, ವೀಣೆಗೆ - ತಂತಿಗಳು ಹೊಂದಿಕೊಂಡಿರುವಂತೆ ಇರುವನು. ಆದುದರಿಂದ ನಿಮ್ಮ ಸಮಾಗಮದ ಪ್ರೀತಿಯಿಂದ, ಯೇಸು ಕ್ರಿಸ್ತನೇ ಹಾಡಾಗಿ ಹೊರ ಹೊಮ್ಮಿರುವನು. ತದ ನಂತರ, ಪ್ರತಿಯೊಬ್ಬ ಮನುಷ್ಯನು, ಗೀತ ಸಮೂಹವಾಗುತ್ತಾರೆ, ಅವರು ಪ್ರೀತಿಯಲ್ಲಿ ಒಂದಾಗಿ ದೇವರ ಹಾಡನ್ನು ಒಂದೇ ಧ್ವನಿಯಲ್ಲಿ ಹಾಡುವರು, ಕ್ರಿಸ್ತನ ಮೂಲಕ ತಂದೆಗೆ ಏಕ ಸ್ವರದಲ್ಲಿ ಹಾಡಲು ಮುಂದಾಗುತ್ತಾರೆ. ಆಗ ಆತನು ನಿಮ್ಮೆಲ್ಲರನ್ನು ಒಟ್ಟಾಗಿ ಆಲಿಸುವನು, ನಿಮ್ಮ ಕ್ರಿಯೆಯ ಮೂಲಕ ನಿಮ್ಮನ್ನು ಪ್ರೇರಿಸುತ್ತಾನೆ

ಯಾಕೆಂದರೆ ನೀವು ಆತನ ಮಗನೊಂದಿಗೆ ದೇಹದ ಅಂಗವಾಗಿರುವಿರಿ.[5]

ಜಸ್ಟಿನ್ ಮಾರ್ಟಿರ್, ಆರಾಧನೆಯ ಕುರಿತ ತಮ್ಮ ಅಲ್ಪ ವಿವರಣೆಯಲ್ಲಿ ಹಾಡಿನ ವಿಷಯವನ್ನು ತಿಳಿಸಿರುವದಿಲ್ಲ;[6] ಆದರೆ ದಾವೀದನ ಹಾಡಿನ ಕುರಿತು ತಿಳಿಸಿರುವರು.[7] ಇನ್ನೊಂದು ಕಡೆ ಕೀರ್ತನೆಯ ಹೇಳಿಕೆಯನ್ನು ನೀಡಿರುವರು: "ಯೆಹೋವನಿಗೆ ಹೊಸ ಕೀರ್ತನೆಯನ್ನು ಹಾಡಿರಿ; ಎಲ್ಲಾ ಭೂನಿವಾಸಿಗಳೇ, ಯೆಹೋವನಿಗೆ ಹಾಡಿರಿ" [ಕೀರ್ತನೆ 96:1]; "ಆತನ ನಾಮವನ್ನು ಕೊಂಡಾಡಿರಿ. ಆತನ ರಕ್ಷಣೆಯನ್ನು ಪ್ರತಿನಿತ್ಯವೂ ಸಾರಿ ಹೇಳಿರಿ. ಜನಾಂಗಗಳಲ್ಲಿ ಆತನ ಘನತೆಯನ್ನು ಎಲ್ಲಾ ಜನರಲ್ಲಿ ಆತನ ಅದ್ಭುತ ಕೃತ್ಯಗಳನ್ನೂ ಪ್ರಸಿದ್ಧ ಪಡಿಸಿರಿ."[8] ಸರ್ವವಿಷಯಗಳಲ್ಲಿ ತಂದೆಗೆ "ಹಾಡುತ್ತಾ" ಸ್ತುತಿಸಿರಿ "ಹಾಡು" ಎಂಬುದಕ್ಕೆ ಓಡೆ ಮತ್ತು *ಸ್ಯಾಲೋ* ಎಂಬ ಎರಡು ಪದಗಳಿವೆ, ಅದನ್ನು ಸಂಕೇತವಾಗಿ ಉಪಯೋ ಗಿಸಲಾಗಿದೆ.

ಸಭಾಪಿತೃಗಳು ಸಂಗೀತವಾದ್ಯದ ಕುರಿತು ತಿಳಿದಿದ್ದ ನಕಾರಾತ್ಮಕವಾದ ವಿಷಯವನ್ನು ಜೇಮ್ಸ್ ಮೆಕ್‌ಕಿನನ್ ತಿಳಿಸಿ, ಅದರಲ್ಲಿ ಉಚಿತವಾದ ಸೂಚನೆಗಳು ಇಲ್ಲದೆ ಇದ್ದು ಅದನ್ನು ಕೇವಲ ನೈತಿಕ ವಿಚಾರ ಎಂದು ತಿಳಿಸಿರುವರು.[9] ಆರಾಧನೆಯಲ್ಲಿ ತಂತಿ ವಾದ್ಯವನ್ನು ಉಪಯೋಗಿಸಬಹುದು ಎಂಬ ಕ್ಲೇಮೆಂಟ್‌ರವರ ಹೇಳಿಕೆಯಾಗಿರುವದಿಲ್ಲ. ವಾದ್ಯಗಳು, ನೈತಿಕ ವಿಚಾರವಾಗಿರುವದರಿಂದ, ಅದನ್ನು ಆರಾಧನೆಯಲ್ಲಿ ಬಳಸುವುದು ಯೋಚನೆಗೆ ದೂರವಾಗಿರುತ್ತದೆ. ಅದನ್ನು ಉಚಿತ ರೂಪದಲ್ಲಿ ದಾಖಲು ಮಾಡದೆ ಇರುವ ವಿಷಯವು ಚರ್ಚೆಯ ವಿಷಯವಾಗಿರುವದಿಲ್ಲ ಅದು ಪ್ರಶ್ನೆಯೂ ಆಗಿರುವದಿಲ್ಲ.[10]

(ಹೋಲಿಸು 347-407), ನಾಲ್ಕನೇ ಶತಮಾನದಲ್ಲಿದ್ದ ಜಾನ್ ಕ್ರಿಸೋಸಮ್ಮನು ತಿಳಿಸಿ, "ಅದನ್ನು ನುಡಿಸುವವರ ಮಧ್ಯದಲ್ಲಿ ಕ್ರಿಸ್ತನು ಇರುವದಿಲ್ಲ" ಎಂದಿರುವನು. "ತಾಳಗಳನ್ನು" ಕುರಿತು (ಅದು ವಿಚಿತ್ರವಾದ ನೃತ್ಯ) ಎಂದಿರುವನು, "ಅಶ್ಲೀಲ ವಾದ ಹಾಡುಗಳು ಸೈತಾನನ ಒಂದು ಗುಪ್ಪೆ ಎಂದಿರುವನು ... ಅಥವಾ ಕಸ."[11] ಕೊಳಲು, ವೀಣೆ, ಹಾಗು ತುತ್ತೂರಿಗಳ ವ್ಯವಹಾರವನ್ನು ತಿರಸ್ಕರಿಸದ ಹೊರತು ದೀಕ್ಷಾಸ್ನಾನವನ್ನು ನೀಡುತ್ತಿರಲಿಲ್ಲ.[12] ವಾದ್ಯಗಳು ಅನೈತಿಕಕ್ಕೂ ಮತ್ತು ಅನ್ಯರಿಗೂ ಸಂಬಂಧಪಟ್ಟವುಗಳಾಗಿದ್ದವು, ಅದು ಅವರ ಹಕ್ಕಾಗಿತ್ತು.

ಮನೆಯಲ್ಲಿ ಮಾತ್ರ ವೀಣೆಯನ್ನು ಕೊಂಬನ್ನು ಕ್ಲೆಮೆಂಟನು ಅನುಮತಿಸಿದ್ದನ್ನು ಸಭೆಗಳ ಆರಾಧನೆಯಲ್ಲಿದ್ದ ವಾದ್ಯಗಳ ಕುರಿತು ಯಾವುದೇ ಸಭಾಪಿತೃಗಳು ನಿಷೇದವನ್ನು ವ್ಯಕ್ತಪಡಿಸಿರಲಿಲ್ಲವೆಂದು, ಜೇಮ್ಸ್ ಮ್ಯಾಕಿನನ್ ತಿಳಿಸಿರುವನು.[13] ಅದರ ಉಪಯೋಗದ ಕುರಿತು ವಿರೋಧ ಅಭಿಪ್ರಾಯಗಳು ಸಭೆಯಲ್ಲಿ ಇರಲಿಲ್ಲವೆಂದು ಅವನು ತಿಳಿಸಿರುವನು. ಹಬ್ಬಗಳಲ್ಲಿ, ನಾಟಕ ಮಂದಿರಗಳಲ್ಲಿ ಮತ್ತು ಮದುವೆ ಸಮಾರಂಭಗಳಲ್ಲಿದ್ದ ಅದರ ಉಪಯೋಗ ವನ್ನು ಮಾತ್ರ ತಿಳಿಸಿರುವನು, ಅದರ ಚರ್ಚೆಯನ್ನು ಸಹ ಮಾಡಲಾಗಿದೆ.

> ಮೊದಲ ಎರಡು ಶತಮಾನದಲ್ಲಿ ... ಸ್ತುತಿಯ ವಿಷಯವಾಗಿ ಮಾತ್ರ ತಿಳಿಸಲಾಗಿದೆ ಅನ್ಯ ಜನರಲ್ಲಿಯೂ ಮತ್ತು ತೀವ್ರವಾದಿಗಳ ಗುಂಪಿನಲ್ಲಿಯು ಇದರ ಕುರಿತು ತಿಳಿಸಿರುವದಿಲ್ಲ ...
>
> ಮೂರು ಮತ್ತು ನಾಲ್ಕನೆಯ ಶತಮಾನದವರೆವಿಗೂ, ವಾದ್ಯಗಳ ಕುರಿತು ವಿರೋಧವು ಉದ್ಭವಿಸಿರಲಿಲ್ಲ.[14]

ನಾಟಕ ಮಂದಿರಗಳಲ್ಲಿ ಉಪಯೋಗಿಸುವ ವಾದ್ಯಗಳನ್ನು ಕ್ರೈಸ್ತರು ನಿಷೇದಿಸ ಬೇಕೆಂದು ಟೆರಟುಲಿಯನನ್ನು ತಿಳಿಸಿರುವನು.[15]

ಯೆಹೂದ್ಯರು ಪರಿಣಿತಿಗೆ ಬಾರದೆ ಇದದ್ದರಿಂದ, ವಾದ್ಯಗಳನ್ನು ನಿಷೇಧಿಸಿರಲಿಲ್ಲ ವೆಂದು ಐದನೇ ಶತಮಾನದ ನಾಯಕರುಗಳು ತಿಳಿಸಿದ್ದರು, ಇತರೆ ಸಂಗತಿಗಳ ಸಂಗಡ ಪ್ರಾಣಿವಧೆಯನ್ನು ಮತ್ತು ವಾದ್ಯಗಳನ್ನು ಸಹ ನಿಷೇದಿಸಲಾಗಿತ್ತು.[16] ಇವುಗಳು ಹಳೇ ಒಡಂಬಡಿಕೆಗೆ ಸಂಬಂಧಪಟ್ಟಿದ್ದರಿಂದ, ಹೊಸ ಒಡಂಬಡಿಕೆಯಲ್ಲಿ ಆಚರಣೆಗೆ ಬಂದಿತ್ತು.[17]

---

ಟಿಪ್ಪಣಿಗಳು

[1]Pliny *Pliny's Epistles* 10.96. [2]Barnabas *Epistle* of Barnabas 6. [3]*2 Clement* 9.10. [4]Ignatius *Epistele to the Romans* 2. [5]Ignatius *First Epistele to the Ephesians* 4. [6]Justin Martyr 1 *Apology* 67. [7]Justin Martyr *Dialogue with Trypho* 29. [8]Ibid., 74. [9]James McKinnon, "The Meaning of the Patristic Polemic Against Musical Instruments," *Current Musicology* (Spring 1965): 72. [10]Ibid.

[11]John Chrysostom *Homilies on First Corinthians* 12.11. [12]*Apostolic Constitutions* 8:31. [13]McKinnon, 71. [14]Ibid., 74. [15]Tertullian *The Shows* 10. [16]Theodoret *Questions and Answers for the Orthodox* 61:1353. [17]McKinnon, 76-77.